ಎರಡನೇ ಕಾರ್ತೀಕ ಇರಲಿ, ಕಾರ್ತೀಕಮಾಸ ಕಳೆದು ಹೋದರೂ ಕಾಂತಿ ಮದುವೆಯ ಬಗ್ಗೆ ಚಕಾರ ಎತ್ತುತ್ತಿಲ್ಲ. ಕೇಳಿದರೆ ಮತ್ತದೇ ದುಡ್ಡಿನ ತಾಪತ್ರಯದ ಗಂಟು ಬಿಚ್ಚಿಕೊಂಡಿತು. 'ಸಂಕ್ರಾಂತಿಯ ನಂತರ ಸಿಂಪಲ್ ಮದುವೆ, ಯಾವುದಾದರೂ ದೇವಸ್ಥಾನದಲ್ಲಿ...' ಅಂದಳು ಕಾಂತಿ. ಮದುವೆ ಮುಂದೆ ಮುಂದೆ ಹೋಗುತ್ತಿರುವುದರ ಕುರಿತು ಅವಳಿಗೆ ಯಾವ ಆತಂಕವೂ ಇದ್ದಂತೆ ಕಾಣದೆ ನನಗೇ ತಳಮಳ. ಕಾಂತಿ ಮಾತ್ರಾ ನಿಶ್ಚಿತಾರ್ಥದ ದಿನ ಮೈಮೇಲೆ ಏರಿಸಿಕೊಂಡ ನಕಲಿ ಒಡವೆಗಳನ್ನು ಕಳಚದೆ, ಇತ್ತೀಚೆಗೆ ಅವಳು ಮೈ ಹಿಡಿದಂತೆ ಕಾಣುತ್ತಿರುವುದು ನನ್ನ ಭ್ರಮೆಯೋ ಅಥವಾ ಮದುವೆಯೇ ಇಲ್ಲ ಅಂದುಕೊಂಡಿದ್ದವಳಿಗೆ ದಕ್ಕಿದ ಅನಿರೀಕ್ಷಿತ ಸಂಭ್ರಮದ ಫಲಶ್ರುತಿಯೋ? ಬಿಲ್ಡಿಂಗ್ ಕಾಂಟ್ರ್ಯಾಕ್ಟ್ ಕೆಲಸವಂತೆ ಕಾಂತಿಯ ಭಾವೀ ಪತಿಗೆ. ದುಶ್ಚಟಗಳಿಲ್ಲದಿದ್ದರೆ ಕಾಂತಿ ಸುಖವಾಗಿ ಬದುಕಬಹುದು. ಯಾರ ಹಣೆಯಲ್ಲಿ ವಿಧಿ ಏನೇನು ಬರೆದಿರುತ್ತದೆಯೋ ಯಾರಿಗೆ ಗೊತ್ತಿರುತ್ತದೆ?

★★★

ತಿಂಗಳ ಸಂಬಳ ಸಿಗುವ ಒಂದನೇ ತಾರೀಖು ಯಾವತ್ತೂ ಕೆಲಸಕ್ಕೆ ಬರುವುದನ್ನು ತಪ್ಪಿಸದ ಕಾಂತಿ ಈ ಸಲ ಕೆಲಸಕ್ಕೆ ಬರಲಿಲ್ಲ. ಯಾವಾಗ ಕೆಲಸಕ್ಕೆ ರಜಾ ಹಾಕುವುದಾದರೂ ಮುಂಚಿನ ದಿನ ಹೇಳಿರುತ್ತಿದ್ದವಳು ಈ ಸಲ ಮುನ್ಸೂಚನೆಯನ್ನೂ ಕೊಟ್ಟಿರಲಿಲ್ಲ. ಇನ್ನೇನು ಮದುವೆಯ ದಿನ ಹತ್ತಿರ ಬಂದಿದೆ. ನನ್ನ ಇಷ್ಟ, ಕಷ್ಟಗಳ ಕುರಿತು ಅವಳಿಗೇನಿರುತ್ತದೆ ಕಾಳಜಿ? ಇನ್ನು ಕೆಲಸಕ್ಕೆ ಬರದೇನೇ ಇದ್ದರೂ ಆಶ್ಚರ್ಯವಿಲ್ಲ. ನುಸಿ ಆಡುತ್ತಿರುವ ಮುಸುರೆಪಾತ್ರೆಗಳಿಗೆ ಗತಿ ಕಾಣಿಸಬೇಕೆಂಬ ಆತಂಕದಲ್ಲಿ ಸೆರಗು ಸೊಂಟಕ್ಕೆ ಬಿಗಿದುಕೊಳ್ಳುವಾಗ ಕಾಲಿಂಗ್ ಬೆಲ್ ಸದ್ದಾಯ್ತು. 'ತಡವಾದರೂ ಸರಿ, ಪುಣ್ಯಾತ್ಗಿತ್ತಿ ಬಂದಳು' ಎನ್ನುವ ಸಮಾಧಾನದಲ್ಲಿ ಬಾಗಿಲು ತೆಗೆದರೆ ಎದುರಿಗೆ ಕಂಡಿದ್ದು ಕಾಂತಿಯ ಅಮ್ಮ.

"ಹೇಳ್ದೆ ಕೇಳ್ದೆ ಚಕ್ಕರ್ ಹಾಕಿದಾಳಲ್ಲ, ಒಂದು ಮಾತು ಹೇಳ್ಬೇಕೂಂತ ಗೊತ್ತಿರ್ಲಿಲ್ವಾ?" ಬೇಡವೆಂದರೂ ಮಾತಿನಲ್ಲಿ ಅಸಮಾಧಾನ ಇಣುಕಿತು. "ಮೂದೇವಿಗೆ ಜಡ ಬಂದಿದೆ. ಮೈಕೈ ನೋವಂತೆ ಅವ್ವಾರೇ. ನಾನೇ ದುಡ್ಡು ತಗೊಂಡ್ಹೋಗೋಕೆ ಬಂದೆ..."

ಕಾಂತಿಯ ಕೊನೇ ಸಂಬಳದ ದುಡ್ಡು ತಂದು ಅವಳ ಅಮ್ಮನ ಕೈಗೆ ಕೊಟ್ಟೆ.

"ಇನ್ನೇನು ಮದುವೆ ದಿನ ಹತ್ರ ಬಂತಲ್ಲ, ಬೇಗ ಹುಷಾರಾಗೋಕೆ ಹೇಳು..." ಎಂದೆ ಲೋಕಾರೂಢಿಯಾಗಿ.

"ಯಾರ ಮದುವೆ?" ಕೇಳಿದಳು ಕಾಂತಿಯ ಅಮ್ಮ, ಬಾಯಿ ಕಳೆದುಕೊಂಡು.

"ಕಾಂತಿಗೆ ಮದುವೆಯಂತಲ್ಲ, ಸಂಕ್ರಾಂತಿ ಆದ್ಮೇಲೆ ಅಂತ ಹೇಳ್ತಿದ್ದಲ್ಲ?"

ಭ್ರುಕುಟಿಗಳು ಒಗ್ಗೂಡುವಂತೆ ಕಾಂತಿಯ ಅಮ್ಮ ಮುಖ ಗಂಟು ಹಾಕಿಕೊಂಡಳು.

"ಅದರ ತಲೆ. ಅದನ್ನ ಯಾರು ಮದುವೆ ಆಗ್ತಾರಂತೆ ಅವ್ವಾರೇ, ದಿನಕ್ಕೊಂದು ರೋಗ. ಮುಚ್ಚಿಟ್ಟು ಮದ್ವೆ ಮಾಡಿದ್ರೂ ವಾಪಸ್ ಕರ್ಕಂಬಂದು ಬಿಟ್ಟು ಹೋಗ್ತಾರೆ..." ಇದೀಗ ಬಾಯಿ ಕಳೆದುಕೊಂಡು ನಿಲ್ಲುವ ಸರದಿ ನನ್ನದು.

"ಹೂ ಮುಡಿಸೋ ಶಾಸ್ತ್ರ ಆಯ್ತು ಅಂತ ಅವತ್ತೇ ಹೇಳಿದ್ಲು?"

"ಅದಕ್ಕೆ ತಲೆ ಕೆಡ್ತಿದೆ..."

ಕಾಂತಿಯ ಅಮ್ಮ ಹೊರಟು ಹೋದರೂ ನಾನು ಮರವಟ್ಟವಳಂತೆ ಬಾಗಿಲಲ್ಲಿ ನಿಂತಿದ್ದೆ. 'ಅದಕ್ಕೆ ತಲೆ ಕೆಡ್ತಿದೆ' ಎನ್ನುವಂತಾ ತಟ್ಟಿ ಹಾರಿಸುವ ಮಾತು ವಾಸ್ತವವೂ ಇರಬಹುದಲ್ಲವೇ? ಕಾಂತಿ ಮಾನಸಿಕ ಸ್ಥಿಮಿತ ಕಳೆದುಕೊಂಡು ಭ್ರಮೆಯನ್ನು ವಾಸ್ತವದಲ್ಲಿ ಆರೋಪಿಸಿಕೊಳ್ಳುತ್ತಿದ್ದಾಳೆಯೇ? 'ಹಗುರವಾಗಿ ಪರಿಗಣಿಸುವಂತಾ ವಿಷಯ ಇದಲ್ಲ' ಎಂದು ಕಾಂತಿಯ ಮನೆಯವರಿಗೆ ಮನವರಿಕೆ